ಇ ಟ್ರಾಕ್ಟರ್ ಸಾಲ ಸರಾಸರಿ ವಸೂಲಾತಿ ಶೇಕಡ 46.08 ಟ್ರಾಕ್ಟರ್ ಸಾಲಗಾರರಿಂದ ಬರಬೇಕಾಗಿರವ ಸುಸ್ತಿ ಹಣ775.03 ಲಕ್ಷ ರೂಪಾಯಿಗಳು.

ವಿಷಯ:- ಬೋಧಕ ಸಿಬ್ಬಂದಿಯ ಹುದ್ದೆಗಳನ್ನು ಭರ್ತಿ ಮಾಡುವುದರ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ 440 (2106)

ಶ್ರೀ ಬಿ.ಹೆಚ್.ಬನ್ನಿಕೋಡ್ (ಹಿರೇಕೆರೂರ್):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ ರಾಜ್ಯ ಸರ್ಕಾರದ ಪ್ರಥಮ ದರ್ಜೆಯ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜುಗಳ ಸಂಖ್ಯೆ ಎಷ್ಟು?

ಆ ಈ ಕಾಲೇಜುಗಳಿಗೆ ಒಟ್ಟು ಅವಶ್ಯವಿರುವ ಬೋಧಕ ಸಿಬ್ಬಂದಿ ಸಂಖ್ಯೆ ಎಷ್ಟು, ಹಾಗೂ ಸದ್ಯ ಖಾಲಿಯಿರುವ ಸಂಖ್ಯೆ ಎಷ್ಟು?

ಇ ಖಾಲಿಯಿರುವ ಬೋಧಕೇತರ ನೌಕರರ ಸಂಖ್ಯೆ ಎಷ್ಟು?

ಈ ಖಾಲಿಯಿರುವ ಬೋಧಕ ಮತ್ತು ಬೋಧಕೇತರ ನೌಕರರನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎಂ.ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)-

ಅ 118

ಆ 3031

335 ಹುದ್ದೆಗಳು ಖಾಲಿ ಇವೆ.

ಇ 451

ಈ 271 ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕ ಸೇವಾ ಆಯೋಗವನ್ನು ಕೋರಲಾಗಿದೆ.

ಉಳಿದ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿಷಯ:- ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಮೀಟರ್ ತೆಗೆಯುವುದರ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 439 (2178)

ಶ್ರೀ ಅಜಯ್‌ಕುಮಾರ್ ಸರ್ ನಾಯಕ್ (ಬಾಗಲಕೋಟೆ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಪಂಪ್‌ಸೆಟ್‌ಗಳಿಗೆ ಮೀಟರ್ ಜೋಡಣೆಯನ್ನು ಯಾವ ವರ್ಷದಿಂದ ತೆಗೆಯಲಾಯಿತು.

ಆ ಮೀಟರ್ ಜೋಡಣೆ ತೆಗೆದ ವರ್ಷದಿಂದ ಪ್ರತಿ ವರ್ಷ ಪಂಪುಸೆಟ್ಟುಗಳ ಸರಾಸರಿ ವಾರ್ಷಿಕ ಬಳಕೆ ಎಷ್ಟು ಯೂನಿಟ್ಟು ಗಳಿಗೆ ನಿಗದಿಪಡಿಸಲಾಗಿದೆ.

ಶ್ರೀ ಎಂ.ರಾಮಪ್ಪ(ಇಂಧನ ರಾಜ್ಯ ಮಂತ್ರಿಗಳು)

ಅ ಮೊದಲು 5 ಅಶ್ವಶಕ್ತಿ ವರೆಗಿನ ಪಂಪ್‌ಸೆಟ್‌ಗಳಿಗೆ ನವೆಂಬರ್ 80ರಲ್ಲಿ, ನಂತರ ಫೆಬ್ರುವರಿ 81ರಿಂದ ಹತ್ತು ಅಶ್ವಶಕ್ತಿವರೆಗಿನ ಪಂಪ್‌ಸೆಟ್‌ಗಳಿಗೆ ಮೀಟರ್ ಜೋಡಣೆಯನ್ನು ತೆಗೆಯಲಾಯಿತು.

ಆ ಮೀಟರ್ ಜೋಡಣೆ ತೆಗೆದ ನಂತರ ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಬಳಕೆಗೆ ಯಾವ ಮಿತಿಯನ್ನು ನಿಗದಿಪಡಿಸಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ.ವೀರಪ್ಪಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರ ಸಚಿವರು):- ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ 25-3-1992ರಲ್ಲಿ ಲಿಖಿತಮೂಲಕ ಉತ್ತರಿಸುವ 22ನೇ ಪಟ್ಟಿಯಲ್ಲಿನ 56 ಪ್ರಶ್ನೆಗಳ

ಪೈಕಿ ಪ್ರಶ್ನೆಗಳ ಸಂಖ್ಯೆ22. 84. 2101. 2115. 2126. 2180. 2185. 2281 ಮತ್ತು 2282 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನು ಉಳಿದ 48 ಚುಕ್ಕೆ ರಹಿತ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿಷಯ:- ಪರಿಶಿಷ್ಟ ಜಾತಿಗೆ ಸೇರಿದ ನಿರುದ್ಯೋಗಿ ಪದವೀಧರರಿಗೆ ನ್ಯಾಯಬೆಲೆ ಅಂಗಡಿಗಳ ಪರವಾನಗಿಗಳನ್ನು ನೀಡುವುದರ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1499 (1561)

ಶ್ರೀ ಕೆ.ಸಿದ್ದಯ್ಯ, (ಸಂತೇಮರನಹಳ್ಳಿ):- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

ಅ ಆಹಾರ ಧಾನ್ಯಗಳನ್ನು ಹಾಗೂ ಸೀಮೆಎಣ್ಣೆಯನ್ನು ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಿಸಲು ಮೈಸೂರು ಜಿಲ್ಲೆಯಲ್ಲಿ ನೀಡಲಾದ ಪರವಾನಗಿಗಳೆಷ್ಟು?

ಆ ಇವುಗಳಲ್ಲಿ ಎಷ್ಟು ಪರವಾನಗಿಗಳನ್ನು ಪರಿಶಿಷ್ಟ ಜಾತಿಯವರಿಗೆ ಮತ್ತು ಉಳಿದ ಮತದವರು ಹೊಂದಿದ್ದಾರೆ?

ಇ ಪರಿಶಿಷ್ಟ ಜಾತಿಗೆ ಸೇರಿದ ನಿರುದ್ಯೋಗಿ ಪದವೀಧರರಿಗೆ ಉದ್ಯೋಗ ಒದಗಿಸುವ ಕ್ರಮವಾಗಿ ಶೇಕಡ 25 ರಷ್ಟು ಪರವಾನಗಿಗಳನ್ನು ನೀಡಲು ಸರ್ಕಾರವು ಪರಿಶೀಲಿಸುವುದೇ ?

ಶ್ರೀ ಟಿ.ಎನ್.ನರಸಿಂಹಮೂರ್ತಿ,(ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)-

ಅ 1247 ನ್ಯಾಯಬೆಲೆ ಅಂಗಡಿಗಳು
1799ಸೀಮೆಎಣ್ಣೆ ವಿತರಕರು.

ಆ ನ್ಯಾಯಬೆಲೆ ಅಂಗಡಿಗಳು:-
98 ಪರಿಶಿಷ್ಟ ಜಾತಿ :ಪರಿಶಿಷ್ಟ ವರ್ಗದವರು.
1149ಉಳಿದ ಜಾತಿ ಮತದವರು.
ಸೀಮೆಎಣ್ಣೆ ಪರವಾನಗಿಗಳು:-
275ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರು
1524ಉಳಿದ ಜಾತಿ ಮತದವರು.

ಇ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡುವಾಗ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದವರಿಗೆ ಆದ್ಯತೆ ನೀಡಲು ಸರ್ಕಾರದ ಸೂಚನೆಗಳಿದ್ದವು, ಆದರೂ ಇನ್ನೂ ಹೆಚ್ಚಿನ ಪ್ರಾತಿನಿಧ್ಯ ನೀಡಲು ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡುವಾಗ ಪರಿಶಿಷ್ಟ ಜಾತಿ :ಪರಿಶಿಷ್ಟ ವರ್ಗದವರಿಗೆ ಮೊದಲ ಆದ್ಯತೆ ನೀಡಲು ಹಾಗೂ ಶೇಕಡಾ 20ರಷ್ಟು ಪ್ರಾತಿನಿಧ್ಯ ನೀಡುವಂತೆ ಸರ್ಕಾರವು ಆದೇಶ ಸಂಖ್ಯೆ ಎಫ್‌ಟಿಡಿ 398ಡಿಆರ್‌ಎ 91 ದಿನಾಂಕ: 19-3-92 ರಂದು ಹೊರಡಿಸಿದೆ.

ವಿಷಯ:- ಮೈಸೂರು ಜಿಲ್ಲೆಯಲ್ಲಿ ನ್ಯಾಯಬೆಲೆ ಅಂಗಡಿಗಳ ಪರವಾನಗಿಗಳನ್ನು ನೀಡಿರುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1500 (2283)

ಶ್ರೀ ಕೆ.ಸಿದ್ದಯ್ಯ, (ಸಂತೇಮರನಹಳ್ಳಿ):- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಮೈಸೂರು ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಸೀಮೆಎಣ್ಣೆ ಹಾಗೂ ಅಗತ್ಯ ವಸ್ತುಗಳ ವಿತರಣೆಗಾಗಿ ನೀಡಲಾದ ಪರವಾನಗಿಗಳ ಸಂಖ್ಯೆ ಎಷ್ಟು?